

◆ **ಅನುವಾದ ಏಕೆ ಮಾಡುತ್ತೀರಿ? ನಿಮ್ಮ ಪ್ರಕಾರ ಅನುವಾದ ಎಂದರೇನು?**

ಈ ಪ್ರಶ್ನೆಗೆ ಉತ್ತರ ಕೊಡಲು ನಾನು ಬಹಳ ಹಿಂದಕ್ಕೆ ಹೋಗಬೇಕಾಗುತ್ತದೆ. ನನ್ನ ಮೊದಲನೆಯ ಅನುವಾದ ನಾನು ಏಳನೇ ತರಗತಿಯಲ್ಲಿದ್ದಾಗ, ಯಾವುದೋ ಭಾವೋದ್ವೇಗದ ಕ್ಷಣದಲ್ಲಿ ವ್ಯಕ್ತಗೊಂಡಿದ್ದು. ಮಲಯಾಳೀ ಭಾಷೆಯವನಾದ ನನ್ನ ಶಿಕ್ಷಣವೆಲ್ಲಾ ಕನ್ನಡ ಮಾಧ್ಯಮದಲ್ಲಿ. ನನ್ನ ಅಪ್ಪ-ಅಮ್ಮ, ಅಣ್ಣ ದೊಡ್ಡಕ್ಕಂದಿರಾರೂ ವಿದ್ಯಾವಂತರಲ್ಲ. ಅಣ್ಣ ಆರು ತಿಂಗಳು ಶಾಲೆಗೆ ಹೋದ ನಂತರ ಅಪ್ಪನೊಡನೆ ವ್ಯಾಪಾರದತ್ತ ಮುಖ ಮಾಡಿದರು. ಅಣ್ಣ ಕ್ರಮೇಣ ಮಲಯಾಳಂ ಜೊತೆ ಕನ್ನಡವನ್ನು ಕಲಿತರು. ನನ್ನ ತಂಗಿ ಮತ್ತು ನಾನು ಮಾತ್ರ ಶಾಲಾ ಶಿಕ್ಷಣ ಪಡೆದವರು. ತಂಗಿ ಎಸ್‌ಎಸ್‌ಎಲ್‌ಸಿಗೆ ವಿದಾಯ ಹೇಳಿದ ನಂತರ ನನ್ನ ಇಡೀ ಕುಟುಂಬ ವರ್ಗದವರು ನನ್ನ ಶಿಕ್ಷಣದತ್ತ ಗಮನ ಹರಿಸುತ್ತಿದ್ದರು. ಐದನೆಯ ತರಗತಿಯವರೆಗೆ ಮನೆಯ ಸಮೀಪದ ಶಾಲೆಯಲ್ಲಿ ಕಲಿತೆ. ಅದರ ನಂತರ ಸೋಮವಾರಪೇಟೆಯಲ್ಲಿ. ಸೋಮವಾರಪೇಟೆಯಿಂದ ನಮ್ಮ ಮನೆಯಿರುವ ಕಬ್ಬಿಣ ಸೇತುವೆ ಎಂಬ ಊರಿಗೆ ತಲುಪಲು ಏಳುಮೈಲು ದೂರ. ಹಾಗೆ ಪ್ರತಿದಿನ ಹದಿನಾಲ್ಕು ಮೈಲಿ ನಡೆದು ಶಿಕ್ಷಣ ಪಡೆಯಬೇಕಾಯಿತು.

ಏಳನೆಯ ತರಗತಿಯಲ್ಲಿ ಓದುವಾಗ ನನ್ನ ಮೊದಲ ಅನುವಾದ ಅದೂ ಕನ್ನಡದಿಂದ ಇಂಗ್ಲಿಷ್‌ಗೆ. ನಮ್ಮ ಕ್ಲಾಸ್ ಟೀಚರ್ ನೀಲಮ್ಮ ಎನ್ನುವವರಿಗೆ ಮಲಯಾಳಿಯಾದ ನನ್ನನ್ನು ಕಂಡರೆ ಆಗುತ್ತಿರಲಿಲ್ಲ. ಮೂವತ್ತರಿಂದ ಮೂವತ್ತೈದು ವಿದ್ಯಾರ್ಥಿಗಳಿರುವ ತರಗತಿಯಲ್ಲಿ ನಾನೇ ಎಲ್ಲಾ ವಿಷಯಗಳಲ್ಲಿ ಮೊದಲಿಗನಾಗಿರುತ್ತಿದ್ದೆ. ಆದರೂ ನೀಲಮ್ಮ ಟೀಚರ್‌ಗೆ ನನ್ನ ಮೇಲೆ ಕೋಪ. ಯಾರೋ ಮಾಡಿದ ತಪ್ಪಿಗೆ ನನಗೆ ಪೆಟ್ಟುಗಳು ಬೀಳುತ್ತಿದ್ದವು. ಆಗ ಸೋಮವಾರಪೇಟೆಯಲ್ಲಿ